## ಪಾಠ 1

## ಸಭೆ:

# ಅದರ ಮಹತ್ವ

**ಅದು ಏನು ಆಗಿರುವದಿಲ್ಲ**

1. **ಅದು ಭೌತಿಕ ಕಟ್ಟಡವಲ್ಲ ಎಂದು ನೀವು ಹೇಗೆ ತಿಳಿದಿರುವಿರಿ (ಅಪೊಸ್ತಲರ ಕೃತ್ಯಗಳು 7:48; 17:24)?**
   a. ಸಭೆಯ ಮೇಲೆ ಏನು ಬಂತು (ಅಪೊಸ್ತಲರ ಕೃತ್ಯಗಳು 5:11)? ಭೌತಿಕ ಕಟ್ಟಡವು ಭಯಪಡಬಹುದೋ?
   b. ಸಭೆಯ ಕಿವಿಗಳಿಗೆ ಏನು ಬಂತು (ಅಪೊಸ್ತಲರ ಕೃತ್ಯಗಳು 11:22)? ಭೌತಿಕ ಕಟ್ಟಡಕ್ಕೆ ಅಂಥ ಅಂಗಗಳಿರುವವೋ?
      (1) ಹಾಗಾದರೆ ಕೂಟಕ್ಕಾಗಿರುವ ಮನೆಯನ್ನು "ಕ್ರಿಸ್ತನ ಸಭೆ" ಎಂದು ಯಾಕೆ ಕರೆಯಬೇಕು?
      ಹೆಸರಿನ ಬದಲಾಗಿ ವಿಶೇಷಣವನ್ನು ಉಪಯೋಗಿಸುವದರಿಂದ, "ಒಂದು ಪದವು ಸೂಚಿಸುವದನ್ನು ಇನ್ನೊಂದು ಪದಕ್ಕಾಗಿ ಇಡುವ ಸಾಮ್ಯ; ಒಳ್ಳೇ ಮೇಜಿನಂತೆ (ಅಂದರೆ ಒಳ್ಳೆ ಆಹಾರ)."
      (2) ನಿಜವಾಗಿಯು, "ಪಾತ್ರೆ"ಗಾಗಿ ಕ್ರಿಸ್ತನು ಕೃತಜ್ಞತೆ ಸಲ್ಲಿಸಿದನೋ (1 ಕೊರಿಂಥ 11:25)? ಆತನು ಆಶೀರ್ವದಿಸಿದ್ದು ಇಲ್ಲವೇ ಕೃತಜ್ಞತೆಸಲ್ಲಿಸಿದ್ದು "ಪಾತ್ರೆ" ಯಾಗಿತ್ತೋ ಇಲ್ಲವೇ ಅದರ ಒಳಗಿದ್ದದ್ದು ಆಗಿತ್ತೋ?
      (3) ಅಕ್ಷರಶಃವಾಗಿ, ಕೂಡಿಬರುತ್ತಿದ್ದ ಮನೆಯು ಸಭೆಯಾಗಿರುವುದೋ? ಇಲ್ಲವೇ ಸಭೆಯು, ಕೂಡಿಬರುತ್ತಿದ್ದ ಮನೆಗೆ ಹೋಗುವುದೋ?
2. **ಸಭೆಯು ಬಾಪ್ತಿಸ್ಮ ಹೊಂದಿದ ವಿಶ್ವಾಸಿಗಳ ಒಂದು ದೇಹವಾಗಿರುವ ಅಗತ್ಯತೆಯಿಲ್ಲ, ಯಾಕೆ?**
   a. ಯೋಹಾನನಿಂದ ಬಾಪ್ತಿಸ್ಮ ಮಾಡಿಸಿಕೊಂಡ ದೊಡ್ಡ ಗುಂಪುಗಳನ್ನು ವಿವರಿಸಿರಿ (ಮತ್ತಾಯ 3:5, 6).
   ಈ ಬಾಪ್ತಿಸ್ಮ ಹೊಂದಿದವರಲ್ಲಿ ಯಾರು ಸಭೆಯಲ್ಲಿ ಇಲ್ಲವೇ ದೇವರ ರಾಜ್ಯದಲ್ಲಿ ಇರಲಿಲ್ಲವೆಂಬುದನ್ನು ತೋರಿಸಿರಿ (ಮತ್ತಾಯ 3:2; 11:11).
   b. ಯೋಹಾನನಿಗಿಂತ ಯಾರು ಹೆಚ್ಚು ಶಿಷ್ಯರನ್ನು ಮಾಡಿದರು ಮತ್ತು ಬಾಪ್ತಿಸ್ಮ ಕೊಟ್ಟರು (ಯೋಹಾನ 4:1, 2)?
   ಆಗ ಬಾಪ್ತಿಸ್ಮ ಹೊಂದಿದವರು ಸಭೆಯ ಸದಸ್ಯರಾಗಿರಲಿಲ್ಲ ಎಂಬುದನ್ನು ರುಜುವಾತು ಪಡಿಸಿರಿ (ಮತ್ತಾಯ 4:17; 16:18).
      (1) ಸಭೆಯ ಎಲ್ಲಾ ಸದಸ್ಯರು ಬಾಪ್ತಿಸ್ಮ ಹೊಂದಿದ ವಿಶ್ವಾಸಿಗಳೆಂಬುದನ್ನು ರುಜುವಾತು ಪಡಿಸಿರಿ (1 ಕೊರಿಂಥ 12:13, 27).
      (2) ಯೋಹಾನನಿಂದ ಮತ್ತು ಯೇಸುವಿನಿಂದ ಬಾಪ್ತಿಸ್ಮ ಹೊಂದಿದವರಲ್ಲಿ

ಯಾರು ಯಾಕೆ ಸಭೆಯ ಸದಸ್ಯರಾಗಲಿಲ್ಲ?
ಆಗ ಸಭೆಯು ಸ್ಥಾಪಿಸಲ್ಪಟ್ಟಿರಲಿಲ್ಲ; ಅದು ಇನ್ನೂ ಸಿದ್ಧತೆಯಲ್ಲಿ ಇತ್ತು.

**ಅದು ಏನಾಗಿರುವುದು**

1. **ಸಭೆಯು ಯಾವ ಅರ್ಥದಲ್ಲಿ ಕೂಡಿಬರುವ ಕೂಟ ಅಥವಾ ಸದಸ್ಸು ಆಗಿದೆ?**
   "Congregation" ಎಂಬುದು ಮೂರು ಪದಗಳಿಂದ ಬಂದಿದೆ: Con ಮತ್ತು gregare, ಕೂಡಿಸಲು ಮತ್ತು grex ಒಂದು ಮಂದೆ, ಹೀಗೆ ಅದು ಕೂಡಿರಬಹುದು, ಸಂಗ್ರಹವಾಗುವುದು ಎಂದರ್ಥವಾಗಿರುತ್ತದೆ.
2. **" ಸಭೆ " ಎಂಬ ಪದವನ್ನು ನಿರೂಪಿಸಿರಿ.**
   ಅದು ekklesia ಎಂಬ ಗ್ರೀಕ ಪದದಿಂದ ಬರುತ್ತದೆ; ಇದು ek - ಹೊರಗೆ ಮತ್ತು kaleo - ಕರೆಯುವುದು ಎಂಬುದರಿಂದ ಬರುತ್ತದೆ, ಇದರ ಅರ್ಥ "ಹೊರಗೆ ಕರೆಯಲ್ಪಟ್ಟವರು."
   a. ಪದವು ಯಾವಾಗಲೂ ಧಾರ್ಮಿಕ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿತೋ?
      ಇಲ್ಲ, ಅಪೊಸ್ತಲರ ಕೃತ್ಯಗಳು 19:32ರಲ್ಲಿ ಜನರ ಗುಂಪು ekklesia ಎಂದಿದೆ. ಅಲ್ಲಿ, ಅದು ಗಲಿಬಿಲಿಗೊಂಡ ಜನರ ಗುಂಪಿಗೆ ಸಂಬಂಧಿಸಿದೆ.
   b. "ಹೊರಗೆ ಕರೆಯಲ್ಪಟ್ಟವರು," ಆಗಿರುವಲ್ಲಿಯ ಅರ್ಥದಲ್ಲಿ ಯಾವುದೇ ಜನರ ಗುಂಪು ಸಭೆಯಾಗಿರುವದಿಲ್ಲವೋ?
   c. ಯಾವುದೇ ಕರೆಯಲ್ಪಟ್ಟ ಸದಸ್ಸು ಮತ್ತು ಸಭೆಯ ಮಧ್ಯದಲ್ಲಿ ಭಿನ್ನತೆ ಹೇಳಿರಿ.
      ಸಭೆಯು ಸುವಾರ್ತೆಯಿಂದ ಹೊರಗೆ ಕರೆಯಲ್ಪಟ್ಟಿದೆ (2 ಥೆಸಲೊನೀಕ 2:13, 14), ಕ್ರೈಸ್ತರ ಕೂಟವು ದೇವರನ್ನು ಆರಾಧಿಸಲಿಕ್ಕೆ ಕೂಡಿಬರುತ್ತದೆ (ಅಪೊಸ್ತಲರ ಕೃತ್ಯಗಳು 20:7).
   d. "ಹೊರಗೆ ಕರೆಯಲ್ಪಟ್ಟಿರುವರಲ್ಲಿ," ಯಾವುದರಿಂದ ಹೊರಗೆ, ಮತ್ತು ಯಾವುದರ ಒಳಗೆ ಒಬ್ಬನು ಕರೆಯಲ್ಪಟ್ಟಿದ್ದಾನೆ (1 ಪೇತ್ರ 2:9ಬಿ)?
   e. ಸಭೆಗೆ ಜಗತ್ತಿನ ಯಾವ ಸಂಬಂಧವು ಇರುವುದು (1 ಯೋಹಾನ 2:15)?
      (1) ಜಗತ್ತಿನಲ್ಲಿ ಯಾವುದು ಇದೆ? ಅದು ದೇವರದಾಗಿರುವದಿಲ್ಲ, ಆದರೆ ಯಾವುದರದಾಗಿರುತ್ತದೆ (1 ಯೋಹಾನ 2:16)?
      (2) ಲೋಕದ ಬಗ್ಗೆ ಏನಾಗುವುದು? ಆದರೆ ಹೊರಗೆ ಕರೆಯಲ್ಪಟ್ಟವರ ಬಗ್ಗೆ ಏನು (1 ಯೋಹಾನ 2:17)?

**ಸಭೆಯ ಬಗ್ಗೆ ಪರಿಶುದ್ಧ ಬರಹಗಳ ಕೆಲವು ಅಂಕಿತಗಳು**

1. **ಕುಟುಂಬ ಸಂಬಂಧಕ್ಕೆ ಸಂಬಂಧಿಸಿ ಸಭೆಯು ಏನಾಗಿದೆ (1 ತಿಮೊಥೆ 3:15)?**
   a. ಈ ಮನೆಯಲ್ಲಿ, ತಂದೆಯು ಯಾರು (ರೋಮಾಪುರ 8:16ಬಿ)?
   b. ಈ ಮನೆಯಲ್ಲಿ, ಕುಟುಂಬದ ಸದಸ್ಯರು ಯಾರು (ರೋಮಾಪುರ 8:17ಎ)?

**2. ದೇವರ ವಾಸಸ್ಥಳಕ್ಕೆ ಸಂಬಂಧಿಸಿ, ಸಭೆಯು ಏನಾಗಿದೆ (1 ಕೊರಿಂಥ 3:16)?**

a. ಈ ಆಲಯದಲ್ಲಿ, ಸಭೆಯಲ್ಲಿ, ಸದಸ್ಯರು ಯಾರು (1 ಪೇತ್ರ 2:5ಎ)? ಯಾಕೆ ಈ ಸಜೀವವುಳ್ಳ ಕಲ್ಲುಗಳು ಒಂದಾಗಿ ಕಟ್ಟಲ್ಪಡುತ್ತಲಿವೆ (1 ಪೇತ್ರ 2:5ಬಿ)?

b. ದೇವರು ಈ ಕಟ್ಟಡದಲ್ಲಿ ಹೇಗೆ ಜೀವಿಸುವನು (ಎಫೆಸ 2:22)?

c. ಕ್ರಿಸ್ತನು ಈ ಕಟ್ಟಡಕ್ಕೆ ಹೇಗೆ ಸಂಬಂಧಿಸಿದ್ದಾನೆ (ಎಫೆಸ 2:20)?

**3. ವ್ಯವಸಾಯಕ್ಕೆ ಸಂಬಂಧಿಸಿ, ಸಭೆಯು ಏನಾಗಿದೆ (1 ಕೊರಿಂಥ 3:9)?**

**4. ನಿಷ್ಠೆಗೆ ಸಂಬಂಧಿಸಿ, ಸಭೆಯು ಏನಾಗಿದೆ (ಗಲಾತ್ಯ 6:10)?**

**5. ಸಂಘಟನೆಗೆ ಸಂಬಂಧಿಸಿ, ಸಭೆಯು ಏನಾಗಿದೆ (ಎಫೆಸ 1:22, 23; ಕೊಲೊಸ್ಸೆ 1:18)?**

a. ಕ್ರಿಸ್ತನು ದೇಹಕ್ಕೆ ಹೇಗೆ ಸಂಬಂಧಿಸಿದ್ದಾನೆ (ಕೊಲೊಸ್ಸೆ 1:18ಎ)? ಕ್ರೈಸ್ತರು ಹೇಗೆ ದೇಹಕ್ಕೆ ಸಂಬಂಧಿಸಿದ್ದಾರೆ (ರೋಮಾಪುರ 12:4, 5)?

b. ಸಭೆಯಲ್ಲಿ ಯಾವ ಸಂಗತಿಗಳ ಮೇಲೆ ಆತನು ಶಿರಸ್ಸಾಗಿದ್ದಾನೆ (ಎಫೆಸ 1:22)?

c. ದೇಹದಲ್ಲಿ ಆತನ ಪರಿಪೂರ್ಣತೆಯ ಬಗ್ಗೆ ಏನು (ಎಫೆಸ 1:23)?

**6. ಮದುವೆಯ ಸಂಬಂಧಕ್ಕೆ ಸಂಬಂಧಿಸಿ, ಸಭೆಯು ಏನಾಗಿದೆ (ಎಫೆಸ 5:22-25)?**

© 2009 Truth for Today